159ನೇ ೬ (51)

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಪಿ.ವಿ.ಮೋಹನ್ ಇವರು ನಿಯಮ 72 ರಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಉತ್ತರ**

**ವಿಷಯ: : ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ ರೂ.8,323.50 ಕೋಟಿಯ ಮೂಲ ಅಂದಾಜಿನಿಂದ ರೂ.23,251.66 ಕೋಟಿಗೆ ಏರಿರುವ ಎತ್ತಿನಹೊಳೆ ಯೋಜನೆಯ ವಾಸ್ತವಿಕ ಪ್ರಗತಿ, ವೆಚ್ಚ, ನೀರಿನ ಲಭ್ಯತೆ, ಫಲಾನುಭವಿ ಜಿಲ್ಲೆಗಳಿಗೆ ತಲುಪುತ್ತಿರುವ ನೀರು ಹಾಗೂ ಮೂಲ ಪ್ರದೇಶವಾದ ದಕ್ಷಿಣ ಕನ್ನಡದ ನೀರಿನ ಭದ್ರತೆ ಕುರಿತು ಸರ್ಕಾರದಿಂದ ಸ್ಪಷ್ಟ ಮಾಹಿತಿ ಪಡೆಯುವುದು. ಇದುವರೆಗೆ ಬಿಡುಗಡೆಯಾದ/ಖರ್ಚಾದ ಮೊತ್ತ, ಕಾಮಗಾರಿ ಪ್ರಗತಿ, ಬಾಕಿ ಕಾಮಗಾರಿ ಮತ್ತು ಪೂರ್ಣಗೊಳ್ಳುವ ಅಂತಿಮ ಗಡುವು. ಮೂಲ ಗುರಿಯಾದ 24.01 TMC ಪೈಕಿ ವಾಸ್ತವವಾಗಿ ಎಷ್ಟು ನೀರು ಲಭ್ಯವಾಗಿದೆ, ಸಮಗ್ರ ಯೋಜನೆಯ ವೆಚ್ಚ, ಕಾಮಗಾರಿ, ವಾಸ್ತವ ನೀರಿನ ಲಭ್ಯತೆ, ಜಿಲ್ಲಾವಾರು ನೀರು ಪೂರೈಕೆ ಹಾಗೂ ದಕ್ಷಿಣ ಕನ್ನಡದ ನೀರಿನ ಭದ್ರತೆ ಕುರಿತು ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ, ಪಶ್ಚಿಮಘಟ್ಟದ ಮೇಲ್ಭಾಗದಲ್ಲಿ ಹರಿಯುವ ಎತ್ತಿನಹೊಳೆ, ಕಾಡುಮನೆಹೊಳೆ, ಕೇರಿಹೊಳೆ ಮತ್ತು ಹೊಂಗದಹಳ್ಳದಿಂದ ಮುಂಗಾರು ಮಳೆ ಅವಧಿಯಲ್ಲಿ 24.01 ಟಿ.ಎಂ.ಸಿ ಪ್ರಮಾಣದ ಪ್ರವಾಹದ ನೀರನ್ನು 07 ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ತುಮಕೂರು, ಹಾಸನ ಹಾಗೂ ಚಿಕ್ಕಮಗಳೂರಿನ ಬರಪೀಡಿತ 29 ತಾಲ್ಲೂಕಿನ 38 ಪಟ್ಟಣ ಪ್ರದೇಶದ ಹಾಗೂ 6657 ಗ್ರಾಮಗಳ ಸುಮಾರು 75.59 ಲಕ್ಷ (Projected population for 2023-24) ಜನರಿಗೆ ಮತ್ತು ಜಾನುವಾರುಗಳಿಗೆ 14.056 ಟಿ.ಎಂ.ಸಿ ಕುಡಿಯುವ ನೀರನ್ನು ಒದಗಿಸುವುದು. ಜೊತೆಗೆ 05 ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಹಾಸನ ಹಾಗೂ ತುಮಕೂರು ವ್ಯಾಪ್ತಿಯಲ್ಲಿ ಬರುವ 527 ಕೆರೆಗಳಿಗೆ 9.953 ಟಿ.ಎಂ.ಸಿ ಪ್ರಮಾಣದ ನೀರನ್ನು ಕೆರೆಗಳ ಸಾಮರ್ಥ್ಯದ ಶೇ. 50% ರಷ್ಟು ತುಂಬಿಸಿ ಅಂತರ್ಜಲ ಮರುಪೂರಣ ಮಾಡುವುದು ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಉದ್ದೇಶವಾಗಿರುತ್ತದೆ.

ಈ ಯೋಜನೆಯ ಮೂಲ ಅಂದಾಜು ಮೊತ್ತವು ರೂ.8323.50 ಕೋಟಿಗಳಾಗಿದ್ದು, ಸದರಿ ಮೊತ್ತಕ್ಕೆ ಸರ್ಕಾರದ ಆದೇಶ ದಿನಾಂಕ:13.07.2012 ರಲ್ಲಿ ಹಾಗೂ ರೂ:12,912.36 ಕೋಟಿಗಳ ಮೊತ್ತದ ಪರಿಷ್ಕೃತ ಯೋಜನಾ ವರದಿಗೆ ಸರ್ಕಾರದ ಆದೇಶ ದಿನಾಂಕ:17.02.2014ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

**ಮೂಲ ಅಂದಾಜು ಮೊತ್ತದಲ್ಲಿನ ಬದಲಾವಣೆಗಳಿಗೆ ಕಾರಣಗಳು :**

2013ರ ಹೊಸ ಭೂಸ್ವಾಧೀನ ಕಾಯ್ದೆಯ ಅನುಷ್ಠಾನ, ದರ ಪರಿಷ್ಕರಣೆ, ಟೆಂಡರ್ ಪ್ರೀಮಿಯಂ, ಮೌಲ್ಯವರ್ಧಿತ ತೆರಿಗೆ (VAT) ರಿಂದ ಸರಕು ಮತ್ತು ಸೇವಾ ತೆರಿಗೆ (GST)ಗೆ ಆದ ಬದಲಾವಣೆಯಿಂದ ಹೆಚ್ಚಳ, ಯೋಜನೆಯಲ್ಲಿ ಅವಶ್ಯವಿರುವ ಹೆಚ್ಚುವರಿ ಕಾಮಗಾರಿಗಳ ಅಳವಡಿಕೆ (ಪಥ ಬದಲಾವಣೆಯಿಂದ) ಮತ್ತು ಫೀಡರ್ ಕಾಲುವೆಗಳಲ್ಲಿ ತೆರೆದ ಕಾಲುವೆ ಬದಲಾಗಿ ಪೈಪ್‌ಲೈನ್‌ಗಳ ಅಳವಡಿಕೆ, ಈ ಎಲ್ಲಾ ಕಾರಣಗಳಿಂದ ಯೋಜನೆಯ ಅಂದಾಜು ಮೊತ್ತವು ಹೆಚ್ಚಾಗಿದ್ದು, ರೂ.23,251.66 ಕೋಟಿಗಳಾಗಿದ್ದು, ಸದರಿ ಪುನರ್ ಪರಿಷ್ಕೃತ ಯೋಜನಾ ವರದಿಗೆ ಸರ್ಕಾರದ ಆದೇಶ ದಿನಾಂಕ:10.01.2023ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

**ಸದರಿ ಯೋಜನೆಯನ್ನು ಎರಡು ಹಂತಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ವಾಸ್ತವಿಕ ಪ್ರಗತಿಯ ವಿವರಗಳು ಕೆಳಕಂಡಂತಿರುತ್ತವೆ.**

**ಹಂತ-1:**

ಹಂತ-1 ರಲ್ಲಿ ಕೈಗೆತ್ತಿಕೊಳ್ಳಲಾಗಿರುವ ಏತ ಕಾಮಗಾರಿಗಳು ಮತ್ತು ವಿದ್ಯುತ್ ಪೂರೈಕೆ ಕಾಮಗಾರಿಗಳನ್ನು 7 ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಎಲ್ಲಾ ಕಾಮಗಾರಿಗಳನ್ನು

ಪೂರ್ಣಗೊಳಿಸಿ 2024ನೇ ಸಾಲಿನಲ್ಲಿ ಪ್ರಾಯೋಗಿಕವಾಗಿ ಚಾಲನೆಗೊಳಿಸಿದ್ದು, ಗುರುತ್ವ ಕಾಲುವೆಯ ಸರಪಳಿ : 32.50 ಕಿ.ಮೀ ವರೆಗೆ ನೀರನ್ನು ಹರಿಸಲಾಗಿದೆ.

**ಹಂತ-2:**

ಹಂತ-2 ರಲ್ಲಿ ಗುರುತ್ವ ಮುಖ್ಯ ಕಾಲುವೆ ನಿರ್ಮಾಣ, ಸಮತೋಲನಾ ಜಲಾಶಯ ನಿರ್ಮಾಣ, ಫೀಡರ್ ಪೈಪ್‌ಲೈನ್ ಕಾಲುವೆ ನಿರ್ಮಾಣ ಕಾಮಗಾರಿಗಳನ್ನು ಒಳಗೊಂಡಿದ್ದು, ಒಟ್ಟು 252.61 ಕಿ.ಮೀ ಉದ್ದದ ಗುರುತ್ವ ಕಾಲುವೆ ನಿರ್ಮಾಣದ ಪೈಕಿ ಸುಮಾರು 226.09 ಕಿ.ಮೀ ಉದ್ದದ ಕಾಲುವೆ ಕಾಮಗಾರಿಗಳು ಪೂರ್ಣಗೊಂಡಿದ್ದು, 17.65 ಕಿ.ಮೀ ಉದ್ದದ ಗುರುತ್ವ ಕಾಲುವೆ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಬಾಕಿ 8.87 ಕಿ.ಮೀ ಕಾಲುವೆ ನಿರ್ಮಾಣ ಕಾಮಗಾರಿಗಳು ಅರಣ್ಯ ಪ್ರದೇಶದಲ್ಲಿ ಹಾದುಹೋಗುತ್ತಿದ್ದುದರಿಂದ ಪ್ರಾರಂಭಗೊಳಿಸಲು ವಿಳಂಬವಾಗಿರುತ್ತದೆ.

ದಿನಾಂಕ: 01.04.2026 ರಂದು ಏಕೀಕೃತ ಅರಣ್ಯ ತೀರುವಳಿ ಪ್ರಸ್ತಾವನೆಗೆ MoEF &Cc ಇವರಿಂದ Stage-1/In-Priniciple ಅನುಮೋದನೆ ದೊರೆತಿದ್ದು, ದಿನಾಂಕ:20.05.2026ರಂದು ಒಂದು ವರ್ಷದ ಅವಧಿಗೆ Working permission (Concretization ಹೊರತುಪಡಿಸಿ, ಬಾಕಿ ಮಣ್ಣಿನ ಅಗೆತ ಕಾಮಗಾರಿಗಳ ನಿರ್ವಹಣೆ) ಗೆ ಅನುಮತಿ ಸಹ ದೊರೆತಿರುವುದರಿಂದ ಪ್ರಸ್ತುತ ಕಾಮಗಾರಿಗಳನ್ನು ಪ್ರಾರಂಭಿಸಲಾಗಿರುತ್ತದೆ.

**ಸಮತೋಲನಾ ಜಲಾಶಯ:**

ಸಮತೋಲನಾ ಜಲಾಶಯಕ್ಕಿಂತ ಮೊದಲು ಕವಲೊಡೆಯುವ ಮಧುಗಿರಿ-ಪಾವಗಡ ಫೀಡರ್, ಟಿ.ಜಿ.ಹಳ್ಳಿ - ರಾಮನಗರ ಫೀಡರ್ ಹಾಗೂ ಗೌರಿಬಿದನೂರು ಫೀಡರ್ ಪೈಪ್‌ಲೈನ್ ಕಾಮಗಾರಿಗಳನ್ನು 4 ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಒಟ್ಟು 254.97 ಕಿ.ಮೀ ನಲ್ಲಿ 249.21 ಕಿ.ಮೀ ಕಾಮಗಾರಿಯು ಪೂರ್ಣಗೊಂಡಿದ್ದು, ಉಳಿಕೆ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ.

ಪ್ರಸ್ತುತ ಪುನರ್ ಪರಿಷ್ಕೃತ ಯೋಜನಾ ವರದಿಯಂತೆ ದೊಡ್ಡಬಳ್ಳಾಪುರ ತಾಲ್ಲೂಕು ಲಕ್ಕೇನಹಳ್ಳಿ ಗ್ರಾಮದ ಸಮೀಪ ನಿರ್ಮಿಸಲು ಉದ್ದೇಶಿಸಿರುವ ಸಮತೋಲನಾ ಜಲಾಶಯ (Balancing Reservoir) ನಿರ್ಮಾಣ ಕಾಮಗಾರಿಯನ್ನು ನಿಗಮದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು ಗುತ್ತಿಗೆದಾರರಿಗೆ ಕರಾರು ವಹಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ದಿನಾಂಕ:06.11.2025 ರಂದು ನಡೆದ ನಿರ್ದೇಶಕರ ಮಂಡಳಿಯ 33ನೇ ಸಭೆಯಲ್ಲಿ 1.88 ಟಿ.ಎಂ.ಸಿ ಸಂಗ್ರಹಣಾ ಸಾಮರ್ಥ್ಯದ ಲಕ್ಕೇನಹಳ್ಳಿ ಸಮತೋಲನಾ ಜಲಾಶಯದ ನಿರ್ಮಾಣದ ಜೊತೆಗೆ ಮುಂಬರುವ ದಿನಗಳಲ್ಲಿ ಕುಡಿಯುವ ನೀರಿಗಾಗಿ ಬೇಡಿಕೆಯು ಹೆಚ್ಚಾಗುವ ಸಂಭವವಿರುವುದರಿಂದ ಕೊರಟಗೆರೆ ತಾಲ್ಲೂಕು ವಡೇರಹಳ್ಳಿ ಸಮೀಪ 1.20 ಟಿ.ಎಂ.ಸಿ ಸಂಗ್ರಹಣಾ ಸಾಮರ್ಥ್ಯದ ಮತ್ತೊಂದು ಸಮತೋಲನಾ ಜಲಾಶಯವನ್ನು ನಿರ್ಮಿಸುವ ಕಾಮಗಾರಿಯ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಅನುಮೋದನೆ ನೀಡಲಾಗಿದ್ದು, ಅದರಂತೆ ವಿವರವಾದ ಯೋಜನಾ ವರದಿಯನ್ನು ತಯಾರಿಸುವ ನಿಟ್ಟಿನಲ್ಲಿ ಸಮಾಲೋಚಕರನ್ನು ನೇಮಿಸಿಕೊಳ್ಳಲು ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಸಮತೋಲನಾ ಜಲಾಶಯದ ನಂತರದಲ್ಲಿ ಬರುವ ಕೋಲಾರ ಲಿಫ್ಟ್ ಪ್ಯಾಕೇಜ್-1 ಮತ್ತು ಗುರುತ್ವ ಪೈಪ್ ಲೈನ್ ಪ್ಯಾಕೇಜ್-2 ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ಕೋಲಾರ ಗುರುತ್ವ ಪೈಪ್ ಲೈನ್ ಪ್ಯಾಕೇಜ್-3 ಮತ್ತು 4 ಹಾಗೂ ಕೋಲಾರ & ಶ್ರೀನಿವಾಸಪುರ ಫೀಡರ್ ಪೈಪ್ ಲೈನ್ ನಿರ್ಮಾಣದ 05 ಪ್ಯಾಕೇಜ್ ಕಾಮಗಾರಿಗಳ ಅನುಮೋದಿತ ಪಂಕ್ತಿಕರಣದಂತೆ ಭೂ ಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ರೈತರೊಂದಿಗೆ ತ್ರಿಪಕ್ಷೀಯ ಒಪ್ಪಂದ ಮಾಡಿಕೊಂಡು ಶೀಘ್ರವಾಗಿ ಕಾಮಗಾರಿಗಳನ್ನು ಪ್ರಾರಂಭಿಸಲು ಕ್ರಮ ಜರುಗಿಸಲಾಗುತ್ತಿದೆ.

**ಯೋಜನೆಯ ವೆಚ್ಚ :**

ಸದರಿ ಯೋಜನೆಗಾಗಿ ಜೂನ್-2026ರ ಅಂತ್ಯಕ್ಕೆ ಒಟ್ಟಾರೆ ಸಂಚಿತ ರೂ.18,883.73 ಕೋಟಿಗಳ ವೆಚ್ಚಮಾಡಲಾಗಿರುತ್ತದೆ.

**ನೀರಿನ ಲಭ್ಯತೆ ಹಾಗೂ ಜಿಲ್ಲಾವಾರು ಲಭ್ಯತೆ :**

ಅನುಮೋದಿತ ಯೋಜನಾ ವರದಿಯಲ್ಲಿ 172.00 ಚ.ಕಿ.ಮೀ ವ್ಯಾಪ್ತಿಯ ಪಶ್ಚಿಮ ಘಟ್ಟದ ಜಲಾನಯನ ಪ್ರದೇಶದಲ್ಲಿ ಅಂದಾಜಿಸಿರುವ ಒಟ್ಟು 31.54 ಟಿ.ಎಂ.ಸಿ (50% dependability) ಇಳುವರಿ ಪೈಕಿ 24.01 ಟಿ.ಎಂ.ಸಿ Divertible yield ಎಂದು ಪರಿಗಣಿಸಲಾಗಿರುತ್ತದೆ.

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಫಲಾನುಭವಿ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ತುಮಕೂರು, ಹಾಸನ ಹಾಗೂ ಚಿಕ್ಕಮಗಳೂರಿಗೆ ಹಂಚಿಕೆಯಾಗಿರುವ ನೀರಿನ ವಿವರಗಳು ಈ ಕೆಳಗಿನಂತಿವೆ:

| ಕ್ರ. ಸಂ | ಜಿಲ್ಲೆ | ಕುಡಿಯುವ ನೀರಿಗಾಗಿ | ಕೆರೆ ತುಂಬಿಸಲು | ಒಟ್ಟು |
|---|---|---|---|---|
| 1 | **ಚಿಕ್ಕಮಗಳೂರು** | 0.154 | - | **0.154** |
| 2 | **ಹಾಸನ** | 0.641 | 0.8 | **1.441** |
| 3 | **ತುಮಕೂರು** | 2.294 | 3.446 | **5.74** |
| 4 | **ಬೆಂಗಳೂರು ದಕ್ಷಿಣ** | 1.834 | - | **1.834** |
| 5 | **ಬೆಂಗಳೂರು ಗ್ರಾಮಾಂತರ** | 1.924 | 1.067 | **2.991** |
| 6 | **ಚಿಕ್ಕಬಳ್ಳಾಪುರ** | 2.217 | 2.876 | **5.093** |
| 7 | **ಕೋಲಾರ** | 2.842 | 2.064 | **4.906** |
| 8 | **ಟಿ.ಜಿ.ಹಳ್ಳಿ ಜಲಾಶಯ** | 1.4 | - | **1.4** |
| 9 | **ಹೆಸರಘಟ್ಟ ಜಲಾಶಯ** | 0.5 | - | **0.5** |
| 10 | **ದೇವನಹಳ್ಳಿ ಕೈಗಾರಿಕ ಪ್ರದೇಶ** | 0.25 | - | **0.25** |
| 11 | **Transmission Loss** | - | -0.30 | -0.30 |
| | **ಒಟ್ಟು** | **14.056** | **9.953** | **24.01** |

**ನೀರಿನ ಭದ್ರತೆ ಕುರಿತು:**

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯು ಮುಂಗಾರು ಅವಧಿಯ ಜೂನ್ 15ರಿಂದ ಅಕ್ಟೋಬರ್ 31ರವರೆಗೆ (ಸುಮಾರು 139 ದಿನಗಳು) ಕಾರ್ಯನಿರ್ವಹಿಸಲು ವಿನ್ಯಾಸಗೊಳಿಸಲಾಗಿದ್ದು, ಪಶ್ಚಿಮಾಭಿಮುಖವಾಗಿ ಮಳೆಗಾಲದಲ್ಲಿ ಹರಿದು ಸಮುದ್ರ ಸೇರುವ ಹೆಚ್ಚುವರಿ ನೀರನ್ನು ಬಳಸಿಕೊಂಡು ರಾಜ್ಯದ ಬರ ಪೀಡಿತ ಪ್ರದೇಶಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಸದುದ್ದೇಶದಿಂದ ರೂಪಿಸಲಾಗಿರುತ್ತದೆ. ಅಕ್ಟೋಬರ್ ತಿಂಗಳ ನಂತರ ಪಂಪಿಂಗ್ ಕಾರ್ಯಾಚರಣೆ ಸ್ಥಗಿತಗೊಳಿಸುವುದರಿಂದ, ಮುಂಗಾರು ನಂತರದ ಅವಧಿಯಲ್ಲಿ ಹೊಳೆಯ ನೈಸರ್ಗಿಕ ಹರಿವಿಗೆ ಯಾವುದೇ ರೀತಿಯ ಅಡಚಣೆ ಉಂಟಾಗುವುದಿಲ್ಲ.ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಜಲಭದ್ರತೆಯ ಮೇಲೆ ಯಾವುದೇ ಪ್ರತಿಕೂಲ ಪರಿಣಾಮ ಉಂಟಾಗುವುದಿಲ್ಲ.

2027ರ ಅಂತ್ಯಕ್ಕೆ ಆದ್ಯತೆ ಮೇಲೆ ಪೂರ್ಣಗೊಳಿಸಿ ಉದ್ದೇಶಿತ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು, ಬೆಂಗಳೂರು ದಕ್ಷಿಣ, ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಿಗೆ ಕುಡಿಯುವ ನೀರನ್ನು ಪೂರೈಸಲು ಯೋಜಿಸಲಾಗಿದೆ.

**ಕಡತ ಸಂಖ್ಯೆ: WRD 98 WLA 2026**

**(ಎನ್.ಚಲುವರಾಯಸ್ವಾಮಿ)**
**ಜಲಸಂಪನ್ಮೂಲ ಸಚಿವರು**